




ಡಾ. ಎಸ್. ರಾಮಮೂರ್ತಿ

# 14-9-2017ರಿಂದ 20-9-2017ರ ವರೆಗೆ




ವಾರದ ಆರಂಭದಲ್ಲಿ ಮನಶಾಂತಿ. ಕೆಲಸ ಕಾರ್ಯಗಳಲ್ಲಿ ಸಫಲತೆ. ಮಕ್ಕಳ ಅಭಿವೃದ್ಧಿ. ಹಿತಕರ ಸಂದೇಶ, ವಾರದ ಮಧ್ಯ ಭಾಗದಲ್ಲಿ ಒತ್ತಡ, ನಿರ್ಧಾರಗಳನ್ನು ತೆಗೆದು ಕೊಳ್ಳಲಾಗುವುದಿಲ್ಲ. ಉದ್ಯೋಗದಲ್ಲಿ ಅಸಮಾಧಾನ. ಲೇವಾದೇವಿಗಳಲ್ಲಿ ಹಿನ್ನಡೆ, ಆರೋಗ್ಯ ವ್ಯತ್ಯಯ. ಹಣದ ವಿಚಾರದಲ್ಲಿ ಮನಸ್ತಾಪ. ಶುಭದಿನ: 15; ಶಿವ ಮತ್ತು ದುರ್ಗಾ ಅಷ್ಟೋತ್ತರ ಪಠಿಸಿ




ವಾರದ ಮಧ್ಯ ಭಾಗದವರೆಗೂ ಸಮಾಧಾನ, ಸೌಖ್ಯ. ಆಟ ಪಾಠಗಳಲ್ಲಿ ಪ್ರಗತಿ. ಉದ್ಯೋಗದಲ್ಲಿ ಮುನ್ನಡೆ. ವ್ಯಾಪಾರದಲ್ಲಿ ಲಾಭ. ಆಪ್ತರಿಂದ ಸಹಾಯ. ಸಮಯೋಚಿತ ಮಾತುಗಳಿಗೆ ಗೌರವ. ಯಂತ್ರೋಪಕರಣಗಳು ಸರಾಗವಾಗಿ ನಡೆಯುವುದು. ವಾರಾಂತ್ಯ ಸೋಮಾರಿತನ. ವೃತ್ತಿ ವ್ಯವಹಾರಗಳಲ್ಲಿ ಹಿನ್ನಡೆ. ಶುಭದಿನ: 17; ಶಿವ ಮತ್ತು ದುರ್ಗಾ ಅಷ್ಟೋತ್ತರ ಪಠಿಸಿ




ಕೆಲಸ ಕಾರ್ಯಗಳು ನಿರೀಕ್ಷೆಯಂತೆ ನಡೆದು ಮನಶಾಂತಿ ದೊರಕುವುದು. ಕ್ರಯವಿಕ್ರಯಗಳಲ್ಲಿ ಅಡಚಣೆಗಳು ದೂರವಾಗಿ ಲಾಭ ಲಭಿಸುವುದು. ಶುಭ ಕಾರ್ಯಗಳಲ್ಲಿ ಆಸಕ್ತಿ ಹೆಚ್ಚುವುದು. ಗುರು ಹಿರಿಯರ ದರ್ಶನದಿಂದ ಧೈರ್ಯ ಉಂಟಾಗುವುದು. ದೀರ್ಘ ಕಾಲದ ಸಮಸ್ಯೆಗಳಿಗೆ ಗಣ್ಯರಿಂದ ಮಾರ್ಗದರ್ಶನ ಪ್ರಾಪ್ತಿಯಾಗುವುದು. ಶುಭದಿನ: 17; ಗಣೇಶ ಮತ್ತು ಲಕ್ಷ್ಮೀ ಅಷ್ಟೋತ್ತರ ಪಠಿಸಿ




ವಾರದ ಆರಂಭದಲ್ಲಿ ಭಯ. ಲೆಕ್ಕಪತ್ರ ಬರವಣಿಗೆ ವ್ಯವಹಾರದಲ್ಲಿ ತಪ್ಪುಗಳಾಗುವುವು. ಶತ್ರು ಭೀತಿ. ಹಣದ ಮುಗ್ಗಟ್ಟು, ವೃತ್ತಿಯಲ್ಲಿ ಸಮಸ್ಯೆ. ಮನೋಬಲ ವೃದ್ಧಿ. ಕೆಲಸ ಕಾರ್ಯಗಳಲ್ಲಿ ಮುನ್ನಡೆ. ಲೇವಾದೇವಿಗಳಲ್ಲಿ ಲಾಭ, ಹಿರಿಯರಿಂದ ಮಾರ್ಗದರ್ಶನ. ಹಿಂದಿನ ತಕರಾರುಗಳು ಬಗೆಹರಿಯುವುವು. ಶುಭದಿನ: 18; ಶಿವ ಮತ್ತು ದುರ್ಗಾ ಅಷ್ಟೋತ್ತರ ಪಠಿಸಿ




ವಾರದ ಆರಂಭದಲ್ಲಿ ಸಮಾಧಾನ. ಕಾರ್ಯಕಲಾಪಗಳಲ್ಲಿ ಯಶಸ್ಸು. ವ್ಯಾಪಾರದಲ್ಲಿ ಆತಂಕ. ಅಹಿತ ಭೋಜನ. ಅನಾವಶ್ಯಕ ತಿರುಗಾಟ. ಉದ್ಯೋಗದಲ್ಲಿ ತಪ್ಪುಗಳಾಗುವಿಕೆ. ಲೇವಾದೇವಿಗಳಲ್ಲಿ ಹಿನ್ನಡೆ. ವಿರೋಧಿಗಳಿಂದ ತೊಂದರೆ. ವಾರಾಂತ್ಯ ಅನುಕೂಲ. ಶುಭದಿನ: 15; ಲಕ್ಷ್ಮೀ ಮತ್ತು ವಿಷ್ಣು ಅಷ್ಟೋತ್ತರ ಪಠಿಸಿ




ವಾರದ ಮಧ್ಯ ಭಾಗದವರೆಗೂ ಮನಶಾಂತಿ. ಶ್ರಮವಿಲ್ಲದೆ ಕಾರ್ಯ ಸಾಧನೆ. ಲೇವಾದೇವಿಗಳಲ್ಲಿ ಲಾಭ. ವಾಹನ ಯಂತ್ರೋಪಕರಣಗಳು ಸುಸ್ಥಿತಿಯಲ್ಲಿ. ಕುಟುಂಬ ಸದಸ್ಯರಲ್ಲಿ ಒಮ್ಮತ. ಬರಬೇಕಾದ ಹಣ ಬರುವುದು. ವಾರಾಂತ್ಯ ವಿಪರೀತ ಶ್ರಮ. ಅನಾವಶ್ಯಕ ಖರ್ಚು. ಉದ್ಯೋಗ ವೃತ್ತಿಯಲ್ಲಿ ಸಮಸ್ಯೆ. ಶುಭದಿನ: 17; ಶಿವ ಮತ್ತು ಸುಬ್ರಹ್ಮಣ್ಯ ಅಷ್ಟೋತ್ತರ ಪಠಿಸಿ




ಉದ್ಯೋಗದಲ್ಲಿ ಮನಶಾಂತಿ. ವ್ಯಾಪಾರ ವೃತ್ತಿಗಳಲ್ಲಿ ನಿರೀಕ್ಷಿತ ಲಾಭ. ವಾಹನ ಯಂತ್ರೋಪಕರಣಗಳು ಸರಾಗವಾಗಿ ನಡೆಯುವುದು. ಗೃಹ ಬದಲಾವಣೆ ಚಿಂತನೆ. ತಕರಾರುಗಳಲ್ಲಿ ನ್ಯಾಯ ಪ್ರಾಪ್ತಿ. ಶುಭ ಕಾರ್ಯಗಳಲ್ಲಿ ಆಸಕ್ತಿ ಹೆಚ್ಚಾಗುವುದು. ಗುರು ಹಿರಿಯರಿಂದ ಮಾರ್ಗದರ್ಶನ ಲಭಿಸುವುದು. ಶುಭದಿನ: 16; ಲಕ್ಷ್ಮೀ ಮತ್ತು ವಿಷ್ಣು ಅಷ್ಟೋತ್ತರ ಪಠಿಸಿ




ವಾರದ ಆರಂಭದಲ್ಲಿ ಮಂದಗತಿಯ ಕೆಲಸ ಕಾರ್ಯಗಳು. ಲೆಕ್ಕ ಪತ್ರಗಳಲ್ಲಿ ಒತ್ತಡ, ವ್ಯಾಪಾರದಲ್ಲಿ ಹಿನ್ನಡೆ. ಹಿರಿಯರ ಮೇಲೆ ಸಿಟ್ಟು. ವಾರದ ಮಧ್ಯ ಭಾಗದಿಂದ ಚೇತರಿಕೆ. ಏಕಾಗ್ರತೆ ಹೆಚ್ಚುವುದು. ಉದ್ಯೋಗದಲ್ಲಿ ಮುನ್ನಡೆ. ಕ್ರಯ ವಿಕ್ರಯಗಳಲ್ಲಿ ಲಾಭ. ಹಿರಿಯರ ಆಶೀರ್ವಾದ ಪಡೆಯಲು ಯತ್ನ. ಪ್ರಯಾಣದಲ್ಲಿ ನಿರಾಂತಕ. ಶುಭದಿನ: 18; ಗಣೇಶ ಮತ್ತು ವಿಷ್ಣು ಅಷ್ಟೋತ್ತರ ಪಠಿಸಿ




ವಾರದ ಆರಂಭದಲ್ಲಿ ಅನುಕೂಲ. ನಿರೀಕ್ಷೆಯಂತೆ ಕಾರ್ಯ ಸಾಧನೆ. ವ್ಯಾಪಾರದಲ್ಲಿ ಮುನ್ನಡೆ. ಹಿತಕರ ಘಟನೆಗಳು, ಪತ್ರಾಗಮನ, ವಾರದ ಮಧ್ಯ ಭಾಗದಲ್ಲಿ ಚಂಚಲ ಮನಸ್ಸು. ಸೋಮಾರಿತನ. ಜ್ಞಾಪಕ ಶಕ್ತಿಯ ಕೊರತೆ. ವೃತ್ತಿ ವ್ಯವಹಾರಗಳಲ್ಲಿ ಸಮಸ್ಯೆ. ಅಕಾಲ ಭೋಜನ. ವಾರಾಂತ್ಯದಲ್ಲಿ ಪರಿಸ್ಥಿತಿ ಸುಧಾರಣೆ. ಶುಭದಿನ: 15; ಗಣೇಶ ಮತ್ತು ವಿಷ್ಣು ಅಷ್ಟೋತ್ತರ ಪಠಿಸಿ




ವಾರದ ಮಧ್ಯ ಭಾಗದವರೆಗೂ ಸುಖ ಸೌಖ್ಯ. ನಿರೀಕ್ಷೆಯಂತೆ ಕೆಲಸ ಕಾರ್ಯಗಳಲ್ಲಿ ಸಫಲತೆ. ವ್ಯಾಪಾರಲ್ಲಿ ಹೆಚ್ಚಿನ ಲಾಭ. ಆತ್ಮೀಯರಿಂದ ಸಹಾಯ. ಪ್ರಯಾಣದಲ್ಲಿ ನಿರಾತಂಕ. ಹಿರಿಯರಿಂದ ಮಾರ್ಗದರ್ಶನ. ಹಿತಕರ ಸುದ್ದಿ. ವಾರಾಂತ್ಯ ಒತ್ತಡ. ಸಂದೇಶಗಳ ವಿಳಂಬ. ವೃತ್ತಿ ವ್ಯವಹಾರಗಳಲ್ಲಿ ಸಮಸ್ಯೆ. ಶುಭದಿನ: 17; ಗಣೇಶ ಮತ್ತು ದುರ್ಗಾ ಅಷ್ಟೋತ್ತರ ಪಠಿಸಿ




ಮನಸ್ಸು ಹಗುರವಾಗುವುದು. ಉದ್ಯೋಗ ವೃತ್ತಿಗಳಲ್ಲಿ ಪ್ರಗತಿ ಕಂಡು ಬರುವುದು. ಹಿರಿಯರಿಂದ ಪ್ರಶಂಸೆ ಲಭಿಸುವುದು. ಕ್ರಯವಿಕ್ರಯಗಳಲ್ಲಿ ನಿರೀಕ್ಷಿತ ಲಾಭ ಲಭಿಸುವುದು. ದೇವತಾ ಕಾರ್ಯಗಳಲ್ಲಿ ಆಸಕ್ತಿ ಹೆಚ್ಚುವುದು. ವಿರೋಧಿಗಳು ತಟಸ್ಥರಾಗುವರು. ಕುಟುಂಬ ಸದಸ್ಯರಲ್ಲಿ ಒಮ್ಮತ ಮೂಡುವುದು. ಶುಭದಿನ: 17; ಲಕ್ಷ್ಮೀ ಮತ್ತು ವಿಷ್ಣು ಅಷ್ಟೋತ್ತರ ಪಠಿಸಿ




ವಾರದ ಆರಂಭದಲ್ಲಿ ಏನಾದರೊಂದು ಸಮಸ್ಯೆ. ವಾಹನಗಳಿಂದ ತೊಂದರೆ. ಪೆಟ್ಟಾಗುವ ಸಾಧ್ಯತೆ. ವೃತ್ತಿಯಲ್ಲಿ ಒತ್ತಡ. ವಾರದ ಮಧ್ಯ ಭಾಗದಿಂದ ಅನುಕೂಲ. ಮನೋಬಲ ಹೆಚ್ಚಾಗುವುದು. ಕೆಲಸ ಕಾರ್ಯಗಳಲ್ಲಿ ಪ್ರಗತಿ. ವ್ಯಾಪಾರದಲ್ಲಿ ಸೂಕ್ತ ಲಾಭ. ಗುರು ಹಿರಿಯರಿಂದ ಸಹಾಯ. ಕುಟುಂಬ ಸದಸ್ಯರಲ್ಲಿ ಹೊಂದಾಣಿಕೆ. ಶುಭದಿನ: 17; ಶಿವ ಮತ್ತು ಪಾರ್ವತಿ ಅಷ್ಟೋತ್ತರ ಪಠಿಸಿ